ಒಂದಾಣೆ ಮಾಲೆ 312

ಮಹಾಪುರುಷರ

ನುಡಿ ಮುತ್ತುಗಳು

❋

ಸಂಗ್ರಾಹಕ:

ಸುಬ್ರಹ್ಮಣ್ಯ ಆಚಾರ್ಯ, ವಿಶಾರದ, ಪುತ್ತಿಗೆ.

❋

1961

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಅಮೂಲ್ಯ ಧಾರ್ಮಿಕ ಪುಸ್ತಕಗಳು

೧. ಧರ್ಮಶಿಕ್ಷಾ
೨. ಶ್ರೀ ಶಂಕರಾಚಾರ್ಯರ ಜೀವನಚರಿತ್ರೆ
೩. ಶ್ರೀ ಶಂಕರಾಚಾರ್ಯವಿರಚಿತ ಸ್ತೋತ್ರಗಳು
೪. ಅಮರನಾಥ ಯಾತ್ರೆ
೫. ದ್ವಾರಕಾ
೬. ದ್ವಾದಶ ಜ್ಯೋತಿರ್ಲಿಂಗಗಳು
೭. ನಮ್ಮ ವೇದಗಳು
೮. ಶ್ರೀ ಶಂಕರಾಚಾರ್ಯ ವಿರಚಿತ ವಿವೇಕಚೂಡಾಮಣಿ—ಭಾಗ ೧.
೯. ,, ,, ,, —ಭಾಗ ೨.
೧೦. ಶತಪಥ ಬೋಧಾಮೃತ
೧೧. ಕೇನೋಪನಿಷತ್
೧೨. ಈಶಾವಾಸ್ಯೋಪನಿಷತ್
೧೩. ಕೈಲಾಸಮಾನಸ ಸರೋವರ ಯಾತ್ರೆ (ಭಾಗ ೧ ಮತ್ತು ೨).
೧೪. ವೇದಾಂತ ಪ್ರಶ್ನೋತ್ತರೀ
೧೫. ಹಿತೋಪದೇಶ
೧೬. ಅನುಭವ ವೇದಾಂತ— ಈ ಮೇಲಿನ ಅಮೂಲ್ಯ ಧಾರ್ಮಿಕ ಪುಸ್ತಕಗಳು, ಒಂದಾಣೆ ಮಾಲೆಯಲ್ಲಿ ಪ್ರಕಟವಾಗಿವೆ.

ಪ್ರತಿಯೊಂದಕ್ಕೂ ಒಂದಾಣೆ.

ಮೇಲಿನ ಹದಿನಾರು ಪುಸ್ತಕಗಳನ್ನು ಟಪ್ಪಾಲಲ್ಲಿ ತರಿಸಿಕೊಳ್ಳುವವರು 16 ಪುಸ್ತಕಗಳ ಕ್ರಯ ರೂ. 1 ಮತ್ತು ಅಂಚೆವೆಚ್ಚ 0—5—0ಯನ್ನು ಮನಿಯಾರ್ಡರ್ ಮೂಲಕ ಅಥವಾ ಅಂಚೆಚೀಟುಗಳ ಮೂಲಕ ಕಳಿಸಿಕೊಡಬೇಕು. ವಿ. ಪಿ. ಕಳಿಸಲ್ಪಡುವುದಿಲ್ಲ.

ಇವಲ್ಲದೆ, ಸಣ್ಣ ಕಥೆಗಳು, ಏಕಾಂಕ ನಾಟಕಗಳು—ಜೀವನ ಚರಿತ್ರೆಗಳು, ಮುಂತಾಗಿ, ಸುಮಾರು 300ಕ್ಕೂ ಮಿಕ್ಕಿ ಪುಸ್ತಕಗಳು 'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾಗಿವೆ. ಪ್ರತಿಯೊಂದಕ್ಕೂ ಒಂದಾಣೆ. ಪ್ರತಿ ಮೂರಕ್ಕೆ ಅಂಚೆವೆಚ್ಚ 6 ನಯೆಪೈಸೆ.

ಒಂದಾಣೆ ಮಾಲೆ,

ಪ್ರಭಾತ ಆಫೀಸು, ರಥಬೀದಿ, ಮಂಗಳೂರು-1.

ಮಹಾಪುರುಷರ

ನುಡಿ ಮುತ್ತುಗಳು

---

1. ಧನಲೋಭದಿಂದ ಉಪದೇಶಕೊಟ್ಟರೆ ಧರ್ಮದ ನಾಶವಾಗುತ್ತದೆ. ಯಾರಾದರೂ ಪ್ರಶ್ನಿಸಿದರೆ ಚೆನ್ನಾಗಿ ವಿಚಾರಿಸಿ, ಅನಂತರ ಧರ್ಮಕ್ಕೆ ಹಾನಿಯಾಗದೆಂದಾದರೆ ಉಪದೇಶಿಸಬೇಕು.

2. ತಿಳಿದು ಯೋಚಿಸದೆ ಯಾರಿಗೂ ಉಪದೇಶಮಾಡಬೇಡ. ಏಕೆಂದರೆ, ಉಪದೇಶಗ್ರಹಣಮಾಡುವವನು ಒಂದು ವೇಳೆ ಪಾಪಕಾರ್ಯ ಮಾಡುವವನಾದರೆ, ಉಪದೇಶಕನಿಗೆ ಪಾಪದ ಫಲ ಸಿಗುತ್ತದೆ.

3. ಬೇರೆಯವನಲ್ಲಿ ನಂಬಿಕೆ ಉಂಟಾಗಬೇಕಾದರೆ ಮೊದಲು ತನ್ನಲ್ಲಿ ನಂಬಿಕೆ ಹುಟ್ಟಬೇಕು. ತನ್ನನ್ನು ತಾನೇ ನಂಬದಿದ್ದರೆ ಬೇರೆಯವರನ್ನೆಂತು ನಂಬುವುದು?

4. ನೀನು ಕಷ್ಟಪರಿಸ್ಥಿತಿಯಲ್ಲಿರುವಾಗ ಜನರು ನಿನಗೆ ಸಮಾಧಾನ ಹೇಳಲು ಬಂದರೆ, ನಿಜವಾಗಿಯೂ ಅವರು ನಿನ್ನ ಕಷ್ಟದ ವಿವರ ತಿಳಿಯಲು ಬರುವರೇ ವಿನಾ ಸಹಾನುಭೂತಿ ವ್ಯಕ್ತಮಾಡಲು ಅಲ್ಲ.

5. ಉಚಿತ ಶಿಕ್ಷಣದ ಮುಖ್ಯ ಉದ್ದೇಶವು ಕೇವಲ ಜನರೊಡನೆ ಸರಿಯಾಗಿ ಕ್ರಮದಂತೆ ಮಾತನಾಡುವುದೇ ಅಲ್ಲನೆ, ಸರಿಯಾಗಿ ಮಾತನಾಡಿ ಆನಂದದ ಅನುಭವ ಪಡೆಯುವುದೂ ಆಗಿದೆ. ತಥಾ ಕೇವಲ ಪರಿಶ್ರಮ ಪಡುವುದೇ ಅಲ್ಲದೆ, ಪರಸ್ಪ್ರೇಮದ ಅನುಭವ ಪಡೆಯುವುದೂ ಆಗಿದೆ.

ಭಾಗವತ.

6. ಮೊದಲು ದೈಹಿಕ ಒತ್ತಾಯದಿಂದ ಜನರು ಗುಲಾಮರಾಗುತ್ತಿದ್ದರು. ಈಗ ಹಣ ಹಾಗು ಅದರಿಂದ ಕೊಳ್ಳುವ ವಿಲಾಸಗಳ ಆಮಿಷದಿಂದ ಗುಲಾಮರಾಗುತ್ತಾರೆ.

7. ಮನುಷ್ಯನ ಉನ್ನತಿ–ಅವನತಿಗಳಿಗೆ ಅವನ ಮನಸ್ಸೇ ಕಾರಣ.

8. ಆಶ್ರಯವು ಹೀನವಾದರೂ ಆಶ್ರಯಿಸುವುದಕ್ಕೂ ತಿಳಿದಿರಬೇಕು. ಇಲ್ಲದಿದ್ದರೆ ಆಪತ್ತು ಬರುತ್ತದೆ. ಯಥಾ: ದರೋಡೆಯು ಸುಕರ್ಮವಾದರೂ ನುರಿತವನಲ್ಲವಾದೊಡೆ ಸಿಲುಕುವಂತೆ.

9. ಆಶ್ರಯದಾತನು ಉತ್ತಮನೂ ಸುಗುಣಿಯೂ ಸಹೃದಯಿಯೂ ಆಗಿದ್ದರೆ ಆಶ್ರಯವು ಹೀನಾಯವಲ್ಲ.

10. ಅಪಮಾನಿತನು ತನ್ನ ಅಪಮಾನದ ಸೇಡನ್ನು ತೀರಿಸಲು ಹಿಂದು ಮುಂದು ನೋಡದೆ ಮುನ್ನುಗ್ಗುವನು. ಆದರೆ, ಆಗಲೇ ಆತನು ಅವಿವೇಕಿಯೆನಿಸಿಕೊಳ್ಳುವನು.

11. ಮನುಷ್ಯನು ಯಾವುದನ್ನೂ ತನ್ನದಾಗಿ ಇರಿಸಿಕೊಳ್ಳಲಾರ. ಹಾಗೆ ಇರಿಸಿಕೊಳ್ಳುವ ವಸ್ತುವೇ ಜಗತ್ತಿನಲ್ಲಿಲ್ಲ. ಆದರೆ, ತನ್ನದೆಂದು ತಿಳಿದುಕೊಂಡು ನಂಬಿ ಇರಬಹುದು.

12. ನಾವು ಆರಂಭಶೂರರಾಗುವುದಕ್ಕಿಂತ ಉದಾಸೀನರಾಗಿಯೇ ಇರುವುದು ಉತ್ತಮ. ಏಕೆಂದರೆ, ಇತರ ಕರ್ತವ್ಯನಿಷ್ಠರಾದರೂ ಮುಂದು ವರಿಯಬಹುದು.

13. ಹಿತನುಡಿಗಳನ್ನು ಹೇಳುವಾಗ ಹಿತವಾದ ಸ್ವರದಲ್ಲಿ ಹೇಳಬೇಕು. ಇಲ್ಲದಿದ್ದರೆ, ಕೇವಲ ಸ್ವರಭೇದದಿಂದಲೇ ಹಿತನುಡಿಗಳು ಬಿರುನುಡಿಗಳಾಗಬಹುದು.

14. ಅತಿ ವಿನಯವು ಧೂರ್ತರ ಲಕ್ಷಣ.

15. ಉದ್ವೇಗವು ಅನುಭವಿಸಂಯಮಿಗಳಲ್ಲಿ ಇರಲಾರದು.

16. ಮಾನವನಾದವನಲ್ಲಿ ಯಾವುದಾದರೂ ಒಂದು ಕೊರತೆ ಇದ್ದೇ ಇರುತ್ತದೆ. ಹಾಗೆ ಕೊರತೆ ಇಲ್ಲದಿರುವ ನಿರ್ಗುಣನು ಪರಮಾತ್ಮನೇ ಸರಿ.

17. ಬ್ರಹ್ಮಜ್ಞಾನವುಳ್ಳವನೇ ಬ್ರಾಹ್ಮಣನೆನಿಸಿಕೊಳ್ಳುವನೇ ವಿನಹ ಹುಟ್ಟಿನಿಂದ ಯಾರೂ ಬ್ರಾಹ್ಮಣನಾಗಲಾರ.

18. ನೀನು ಸಾಯುವುದಾದರೆ ಸಾಯಿ. ಆದರೆ, ಹುಟ್ಟಿದುದನ್ನು ನೆನಸಿಕೊಳ್ಳುವಂಥ ಉತ್ತಮ ಕ್ರಿಯೆಯನ್ನು ಮಾಡದಿರಬೇಡ.

19. ಲೋಕದ ಆಧಾರಸ್ತಂಭಗಳಲ್ಲಿ ಮುಖ್ಯವಾದ ಮೂರು ವಸ್ತುಗಳು—ಅನ್ನ, ಹಣ, ಕಾಮ ಇವುಗಳಾಗಿರುತ್ತವೆ.

ಅನುಭವಾಮೃತ.

20. ತನಗೆ ಇಷ್ಟವಾದುವುಗಳು ಒದಗದೆ ಹೋದರೆ ಉಂಟಾಗುವ ದುಃಖವು ಸಂಭವಿಸಿದಾಗ ಲೇಶವೂ ವಿಕಾರವನ್ನು ಪಡೆಯದ ಮನಸುಳ್ಳ

ವನು, ತನಗೆ ಪ್ರಿಯವಾದುವುಗಳೆಲ್ಲ ಅನುಕೂಲವಾಗಿ ಒದಗುವುದರಿಂದ ಸುಖಗಳಲ್ಲಿ ತುಸವೂ ಹಂಬಲವೇ ಇಲ್ಲದವನು, ಹೆಂಡಿರು ಮಕ್ಕಳಲ್ಲಿ ಪ್ರೀತಿಯು, ತನ್ನ ಶರೀರ ಮೊದಲಾದುವುಗಳಿಗೆ ಕೆಡುಕುಂಟಾಗುವುದೆಂಬ ಭಯ, ತನ್ನ ಇಷ್ಟಕ್ಕೆ ಭಂಗತರುವುದರ ವಿಷಯವಾಗಿ ಸಿಟ್ಟು, ಇವುಗಳೆಂದೂ ಇಲ್ಲದಂತಹ ಮನುಷ್ಯನು ನೆಲೆಗೆ ನಿಂತ ಬುದ್ಧಿಯುಳ್ಳ ಮುನಿಯೆನ್ನಿಸಿಕೊಳ್ಳುವನು. ಇವನನ್ನು ಸ್ಥಿತಪ್ರಜ್ಞನೆನ್ನುವರು.

ಭಗವದ್ಗೀತೆ.

21. ಸತ್ಯ ಹೇಳಲು ಅತುರಪಡಬಾರದು. ಅದು ತಾನಾಗಿಯೇ ಬರುವ ವಸ್ತು. ಅದನ್ನು ಬಲಾತ್ ಹೊರಗೆಳೆಯಬಾರದು.

22. ಕೋಪದಿಂದ ಸತ್ತರೂ ಸಾಯಿ, ಆದರೆ ನ್ಯಾಯಾಲಯಕ್ಕೆ ಹೋಗಬೇಡ. ಹಸಿವಿನಿಂದ ಮಡಿದರೂ ಮಡಿ, ಕಳವು ಮಾತ್ರ ಮಾಡಬೇಡ.

23. ನೀನು ಪ್ರೀತಿಸಿದ ಹೆಣ್ಣು ನಿನಗೆ ದೊರೆಯದಿದ್ದರೆ ಅದಕ್ಕಾಗಿ ಮರುಗಬೇಡ. ಅನಂತರ ದೊರೆತುದನ್ನೆ ಪ್ರೀತಿಸು.

24. ಸಂದರ್ಭೋಚಿತವಾಗಿ ಮಾತಾಡುವವನು ಜಾಣನಾದರೂ ಹೀನ.

25. ನೀನು ಕೇವಲ ನಿನ್ನ ಧ್ಯೇಯಗಳಿಗಾಗಿ ಬದುಕು. ಸತ್ತರೂ ಧ್ಯೇಯ ಬದಲಾವಣೆಯಾಗಬಾರದು.

26. ಧೈರ್ಯಶಾಲಿಗಳು ಮರಣವನ್ನೆದಿರಿಸುವುದು ಅದಕ್ಕಿಂತಲೂ ದೊಡ್ಡ ವಿಪತ್ತು ಸಂಭವಿಸುವುದೆಂಬ ಭಯದಿಂದ.

27. ಜನರು ಸುಖವನ್ನು ಜಯಿಸುವುದು ಸುಖವು ಅವರನ್ನು ಜಯಿಸಿದಾಗಲೇ.

28. ಬದುಕಿರುವುದೆಲ್ಲವೂ ಸತ್ತುದರಿಂದಲೇ ಜನಿಸುತ್ತದೆ.

29. ವಿಪತ್ತಿಗೆ ಸಿಕ್ಕಿದ ಮಾತ್ರಕ್ಕೆ ಮನುಷ್ಯನು ಗೌರವಕ್ಕೆ ಕೀಳಾದ ಕೆಲಸ ಮಾಡಬಾರದು.

30. ಯಾವುದಾದರೂ ಒಂದು ಪದಾರ್ಥವು ಉತ್ತಮಸ್ಥಿತಿಗೆ ಬರಬೇಕಾದರೆ, ಅದು ಮೊದಲು ಕೀಳಾಗಿರಲೇ ಬೇಕು.

31. ಯೋಜನೆಯಲ್ಲಿ ತಲ್ಲೀನನಾಗುವ ಮೊದಲು ಅದನ್ನು ಕಾರ್ಯಗತಮಾಡಲು ಯೋಚನೆಯಲ್ಲಿ ತಲ್ಲೀನನಾಗು.

32. ಜನರ ಸೌಖ್ಯಕ್ಕೆ ಧರ್ಮವೇ ಮೂಲ. ಧರ್ಮಕ್ಕೆ ಅರ್ಥವೇ—ವಿವಿಧ ಲೌಕಿಕ ಸಂಪತ್ತೇ—ಮೂಲ. ಅರ್ಥಕ್ಕೆ ರಾಜ್ಯವ್ಯವಸ್ಥೆಯೇ ಮೂಲ.

ಚಾಣಕ್ಯ.

33. ನಿಂದೆಮಾಡಬೇಡಿ, ಹಿಂಸೆಮಾಡಬೇಡಿ. ಆಚಾರ ಮತ್ತು ನಿಯಮಗಳಿಂದ ನಿಮ್ಮನ್ನು ಹತೋಟಿಯಲ್ಲಿಟ್ಟುಕೊಳ್ಳಿ. ಮಿತಭೋಜನ ಮಾಡಿ. ಏಕಾಂತವಾಸ ಮಾಡುವುದರಿಂದ ಚಿತ್ತವನ್ನು ಸಾಂಸಾರಿಕ ವಿಷಯ ವಾಸನೆಯಿಂದ ದೂರೀಕರಿಸಿರಿ.

34. ಒಂದು ವರ್ಷ ಚರಿತ್ರಹೀನನಾಗಿ ಬದುಕುವುದಕ್ಕಿಂತ ಒಂದೇ ಒಂದು ದಿನ ಸದಾಚಾರಿಯಾಗಿ ಬದುಕುವುದು ಎಷ್ಟೋ ಮೇಲು.

35. ರಾಗಕ್ಕೆ ಸಮನಾದ ಬೆಂಕಿ, ದ್ವೇಷಕ್ಕೆ ಸಮನಾದ ಅಮಂಗಲ, ಮೋಹಕ್ಕೆ ಸಮನಾದ ಬಲೆ ಮತ್ತು ಆಸೆಗೆ ಸಮನಾದ ನದಿ ಬೇರೆ ಇಲ್ಲ.

ಭಗವಾನ್ ಬುದ್ಧ.

36. ಉತ್ತಮನು ಯಾವುದು ನ್ಯಾಯವೆಂದು ನೋಡುತ್ತಾನೆ. ಅಧಮನು ಯಾವುದು ಸುಲಭದಲ್ಲಿ ಮಾಡಬಹುದೆಂದು ನೋಡುತ್ತಾನೆ.

37. ಉತ್ತಮನು ತನ್ನ ಆತ್ಮವನ್ನು ಪ್ರೀತಿಸುತ್ತಾನೆ. ಅಧಮನು ಸ್ತ್ರೀಯನ್ನು ಪ್ರೀತಿಸುತ್ತಾನೆ. ಉತ್ತಮನು ಯಾವಾಗಲೂ ತಾನು ತನ್ನ ತಪ್ಪಿಗಾಗಿ ಹೇಗೆ ಶಿಕ್ಷಿಸಲ್ಪಟ್ಟೆನೆಂದು ನೆನಸುತ್ತಾನೆ. ಅಧಮನು ತನಗೆ ಸಿಕ್ಕಿದ ಬಹುಮಾನಗಳನ್ನು ನೆನಸುತ್ತಾನೆ.

ಕನ್‌ಫ್ಯೂಶಿಯಸ್.

38. ಗುಡ್ಡವು, ಏರುವವನಿಗೆ ದಾರಿಯಾಗಿ ಪರಿಣಮಿಸುವಂತೆ ಇಳಿಯುವವನಿಗೆ ಇಳುಕಲಾಗಿರುತ್ತದೆ.

39. ಉಣ್ಣೆಯ ಬಟ್ಟೆಗಿಂತ ಬಿಳಿಯ ಬಟ್ಟೆ ಬೇಗ ಹೊಲಸಾಗುತ್ತದೆ.

40. ಪ್ರತಿಯೊಬ್ಬನ ವಿಷಯವಾಗಿಯೂ ಕನಿಷ್ಠ ಪಕ್ಷ ಒಂದು ಆತ್ಮವಾದರೂ ದೇವರಲ್ಲಿ ಮೊರೆಯಿಡುತ್ತಾ ಇರುತ್ತದೆ. ಅದು ಆತನ ತಾಯಿಯ ಆತ್ಮ.

41. ನಮ್ಮೆದುರು ಬೇರೆಯವರನ್ನು ಹಳಿಯುವವನು ಒಂದಿಲ್ಲೊಂದು ದಿನವಾದರೂ ಬೇರೆಯವರ ಎದುರು ನಮ್ಮನ್ನು ಹಳಿಯುವುದು ಖಂಡಿತ.

42. ಸೋಮಾರಿಯಾಗಿ ಕಾಲಕಳೆಯಬೇಡ. ಕೆಲಸವಿಲ್ಲದಾಗ ಒಳ್ಳೆಯ ಸದ್ಗ್ರಂಥಗಳನ್ನು ಓದು. ಮನಸ್ಸಿನ ಶಾಂತಿಯನ್ನೂ ನಿನ್ನ ನೈತಿಕ ಬಲವನ್ನೂ ಹೆಚ್ಚಿಸಿಕೊ.

ಫ್ರಾನ್ಸಿಸ್ ಬೇಕನ್.

43. ನ್ಯಾಯಪಥವನ್ನು ಕಾಣದಿರುವವನು ಅಂಧಾಭಿಮಾನಿ, ಕಾಣಲಾರದವನು ಅವಿವೇಕಿ, ಕಾಣಲು ಅಂಜುವವನು ಗುಲಾಮ.

ವಿಲಿಯಮ್ ಡ್ರಯಂಗ್.

44. ಸಜ್ಜನರಿಗೆ ಕಷ್ಟಗಳೂ ದುರ್ಜನರಿಗೆ ವಿಜಯಗಳೂ ಹೆಚ್ಚಿದರೆ ನಾಸ್ತಿಕತೆ ಮೂಡಲು ಕಾರಣವಾಗುತ್ತದೆ.

ಡ್ರಾಯಡನ್.

45. ವಿವೇಕದಿಂದ ವರ್ತಿಸಿದರೆ ದೇವರ ದಯೆ, ಬಲ ಹೆಚ್ಚುತ್ತದೆ.

46. ಪ್ರೇಮದಿಂದ ಹೆಣ್ಣು ತನ್ನ ನಾಜೂಕುತನವನ್ನು ಕಳಕೊಳ್ಳುತ್ತಾಳೆ. ಗಂಡು ಅದನ್ನು ಹೆಚ್ಚಿಸಿಕೊಳ್ಳುತ್ತಾನೆ.

47. ತನಗಿಂತ ಕಡಿಮೆಯಾದವರನ್ನು ಹೆಣ್ಣು ಎಂದಿಗೂ ಪ್ರೇಮಿಸುವುದಿಲ್ಲ.

ಸಿ. ಸಿಡ್ನಿ.

48. ಹೆಂಗಸಿನ ಸಹವಾಸವು ಸಾಮಾಜಿಕ ಜೀವನದ ಆವಶ್ಯಕವಾದ ಅಪ್ರಿಯ ಕೆಲಸವೆಂದು ಅಂಗೀಕರಿಸು. ಅದರಿಂದ ಸಾಧ್ಯವಾದಷ್ಟು ದೂರವಾಗಿರು.

49. ನಾನು ಗಂಡಾಗಿ ಹುಟ್ಟಿಲ್ಲವೆಂದು ಸಂತೋಷಪಡುತ್ತೇನೆ. ಹಾಗೆ ಹುಟ್ಟಿದ್ದರೆ ಹೆಣ್ಣನ್ನು ಮದುವೆಯಾಗಬೇಕಾದ ದುರ್ಭರ ಪ್ರಸಂಗ ಒದಗಿಬರುತಿತ್ತು.

ಮೆಡಂ ದಿ ಸ್ಟೇಲ್.

50. ಸ್ತ್ರೀಯನ್ನು ಕೆಣಕಿನೋಡು. ಅವಳು ನಿನ್ನನ್ನು ಕ್ಷಮಿಸುವುದೇ ಇಲ್ಲ. ಅವಳನ್ನು ಒಲಿಸಿಕೊಳ್ಳುವ ಯತ್ನಮಾಡು—ನೀನು ಜೀವಂತನಾಗಿರುವ ವರೆಗೆ ನಿನ್ನನ್ನು ಉಪೇಕ್ಷಿಸುತ್ತಾಳೆ.

ಪೋಪ್.

51. ಹೆಂಗಸು ಗಂಡಸಿನೆದುರು ಹೋರಾಡಿ ತನ್ನ ಮಾನ ಕಾಯ್ದು ಕೊಳ್ಳುವುದು ಸುಲಭ. ಆದರೆ, ಆಕೆ ಹೆಂಗಸಿನೆದುರು ಹೋರಾಡಿ ತನ್ನ ಕೀರ್ತಿ ಕಾಪಾಡಿಕೊಳ್ಳುವುದು ಕಷ್ಟ.

ರಾಕೆ ಬ್ರೂನ್.

52. ಸ್ತ್ರೀಯ ಜೀವನ ಅರ್ಧಸತ್ಯ, ಅರ್ಧಕಟ್ಟುಕತೆ, ಸ್ವಲ್ಪವೇ ವಿಚಾರ, ಸ್ವೇಚ್ಛಾಪ್ರವರ್ತನೆ—ಸಂಪೂರ್ಣವಾಗಿ ವಿರೋದಾಭಾಸಗಳಿಂದ ತುಂಬಿದೆ.

ರಿಚಾರ್ಡ್ ಸೆವೇಜ್.

53. ಜಗದಾದಿಯಲ್ಲಿ ಅಲ್ಲಾ ಒಂದು ಗುಲಾಬಿ, ಒಂದು ಕುಮುದ, ಒಂದು ಹಾವು, ಸ್ವಲ್ಪ ಜೇನು, ಮತ್ತು ಒಂದು ಹಿಡಿಮಣ್ಣು ಬೆರೆಸಿದನಂತೆ. ಅದರ ಸಾರವೇ ಸ್ತ್ರೀಯೆಂದು ಪರ್ಶಿಯದ ಒಂದು ಗಾದೆ ಹೇಳುತ್ತದೆ.

ವಿಲಿಯಮ್ ಷಾರ್ಪ್.

54. ಗಂಡಸಿನ ಪ್ರತಿಷ್ಠೆಯನ್ನು ಘಾತಿಸುವುದೆಂದರೆ ಹೆಂಗಸಿಗೆ ಬಲು ಪ್ರೀತಿ.

ಬರ್ನಾರ್ಡ್ ಷಾ.

55. ಹೆಂಗಸು ಬಿದ್ದರೆ ಅದು ಲುಸಿಫರನ ಪತನ. ಅಭ್ಯುತ್ಥಾನವು ಸಾಧ್ಯವೇ ಇಲ್ಲ.

ಕೋಲ್ಬನ್.

56. ಹಿಂದಿನವರು ದೇವರನ್ನು ಕಂಡಿದ್ದರೋ ಇಲ್ಲವೋ!—ಇಂದಿನವರಿಗೆ ಮಾತ್ರ ದೇವರು ಮಸುಕುಮುಸುಕಾಗಿದ್ದಾನೆ.

57. ಒಳಗಿನಿಂದ ತಾನೇತಾನಾಗಿ ಚಿಮ್ಮಿಬರುವ ಶಿಸ್ತಿನಿಂದಲೇ ಮಾನವಪ್ರಗತಿ ಸಾಧ್ಯವಾಗುತ್ತದೆ, ಸಂಪೂರ್ಣವಾಗುತ್ತದೆ.

ಬರ್ಟ್ರಂಡ್ ರಸ್ಸೆಲ್.

58. ಯಾವಾತನು ಬಡವರಿಗಾಗಿ ಮರುಗುವನೋ ಅವನು ಮಹಾತ್ಮನು. ಯಾವನು ಮರುಗುವುದಿಲ್ಲವೋ ಅವನು ದುರಾತ್ಮನು.

ವಿವೇಕಾನಂದ.

59. ಬಡವರಿಗೆ ದಾನಮಾಡಿ ಕೀರ್ತಿಪಡೆ. ಮನುಷ್ಯನಿಗೆ ಇದಕ್ಕಿಂತ ಹೆಚ್ಚಿನ ಲಾಭವಿಲ್ಲ.

60. ಪಡೆಯಲು ಯೋಗ್ಯವಾದ ಜ್ಞಾನವನ್ನು ಸರಿಯಾಗಿ ತಿಳಿದುಕೊ. ತಿಳಿದುಕೊಂಡ ಮೇಲೆ ಅದಕ್ಕೆ ಸರಿಯಾಗಿ ನಡೆ.

61. ವಿದ್ವಾಂಸರು ಒಂದೆಡೆ ಕೂಡಿದಾಗ ಸಂತಸದ ಹಬ್ಬವಾಗುವುದು. ಅಗಲಿದಾಗ ಹೃದಯವನ್ನು ದುಃಖ ಕವಿಯುವುದು.

ಕವಿ ತಿರುವಳ್ಳುವರ್.

62. ನೀನು ಭೂಮಿಯನ್ನಾಳುವ ಅರಸನಾದರೇನು? ನಿನ್ನ ಭೂಮಿಯನ್ನೆ ಉಳಿಸಿಕೊಳ್ಳಲು ನಿನಗೆ ಗುರುವಿನ ಕರುಣೆ ಇಲ್ಲದೆ ಆಗದು.

63. ನಿನ್ನಲ್ಲಿ ತುಂಬಾ ಸಹನೆಯಿದ್ದರೆ ನಿನ್ನ ಮೇಲೆ ಗುರುವಿನ ಕರುಣೆ ಬೀಳುತ್ತದೆ.

64. ಉಪವನದಲ್ಲಿ ತುಂಬಿ ಸಂಚರಿಸುತಿದ್ದರೆನೇ ಚಂದ.

ಬೈಬಲ್.

65. ನುಡಿದರೆ ಮುತ್ತಿನಹಾರದಂತಿರಬೇಕು. ನುಡಿದರೆ ಮಾಣಿಕ್ಯ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಶಲಾಕಿಯಂತಿರಬೇಕು.

ಬಸವಣ್ಣ.

66. ಸ್ತ್ರೀ ಎಂದರೇನು? ಪ್ರಕೃತಿಯ ಸಹ್ಯಾಪರಾಧಗಳಲ್ಲಿ ಒಂದು.

ಕೌಲೆ.

67. ಸ್ತ್ರೀಯರ ಮಹಾಪರಾಧವು ಪುರುಷರಂತೆ ಇರಬೇಕೆಂದು ಬಯಸುವುದಾಗಿದೆ.

ಡಿ. ಮೆಯಿಸ್ತ್ರೆ.

68. ಅತಿ ದಡ್ಡ ಸ್ತ್ರೀ ಅತಿ ಜಾಣ ಪುರುಷನನ್ನು ನಿಭಾಯಿಸಬಹುದು. ಆದರೆ, ಅತಿ ದಡ್ಡ ಪುರುಷನನ್ನು ಅತಿ ಜಾಣ ಸ್ತ್ರೀ ನಿಭಾಯಿಸಲಾರಳು.

ರಡ್ಯಾರ್ಡ್ ಕಿಪ್ಲಿಂಗ್.

69. ನೀನು ಒಬ್ಬೊಂಟಿಗನಾಗಿ ಹೋಗು. ಹಾಗೇ ಆಗುವುದು. ಹೋಗು, ಕಂದೀಲನ್ನು ಹಿಡಿದುಕೊಂಡು ನಿನ್ನಷ್ಟಕ್ಕೇ ಹೋಗು. ಜನರ ಟೀಕೆ ಎಂಬ ಸುಂಟರಗಾಳಿ ಬೀಸಿ ನಿನ್ನ ಕೈಯೊಳಗಿನ ದೀಪವು ನಂದಬಹುದು. ಮತ್ತೆ ಅದನ್ನು ಹಚ್ಚಿಕೊಂಡು ಮುಂದೆ ಹೆಜ್ಜೆ ಹಾಕು.

70. ವಿದ್ಯಾವಂತರಿಗೆ ಮಾತ್ರ ಕಣ್ಣುಗಳಿವೆ, ಅವಿದ್ಯಾವಂತರಿಗೆ ಇರುವುದು ತಲೆಯಲ್ಲಿ ಎರಡು ತೂತು ಮಾತ್ರ.

ಠಾಗೋರ್.

71. ದುಡಿಮೆಯನ್ನು ಪ್ರೋತ್ಸಾಹಿಸುವುದೇ ನಿಜವಾದ ಧರ್ಮ. ಸೋಮಾರಿಯಾಗಿ ಭಿಕ್ಷೆ ಬೇಡುವವನೂ, ಶ್ರೀಮಂತನೆಂದು ಗಾದಿಯ ಮೇಲೆ ಹೊರಳುವವನೂ—ಇಬ್ಬರೂ ಕೀಟಕಗಳೇ!

72. ಶ್ರೀಮಂತನು ಬೇರೆಯವರ ದುಡಿಮೆಯ ಮೇಲೆ ಜೀವಿಸುತ್ತಾನೆ. ಅವರಂತೆ ಭಿಕ್ಷೆ ಬೇಡುವ ಸೋಮಾರಿಯೂ ಬೇರೆಯವರ ಅನ್ನದಿಂದಲೇ ಜೀವಿಸುತ್ತಾನೆ. ಇವರಿಬ್ಬರೂ ಸಮಾಜವೆಂಬ ವೃಕ್ಷದ ಮೇಲಿರುವ ರಣಹದ್ದುಗಳು. ಚಳಿ, ಮಳೆ, ಬಿಸಿಲುಗಳಲ್ಲಿ ದುಡಿಯುವ ಕೂಲಿಗಾರರು, ಬೀದಿಯನ್ನು ಗುಡಿಸುವ ಹೊಲೆಯರು, ಮಲಮೂತ್ರವನ್ನು ಎತ್ತುವ ಭಂಗಿಗಳು, ಸತ್ತ ದನಗಳನ್ನು ಸುಲಿಯುವ ಢೋರರು, ಜೋಡುಗಳನ್ನು ತಯಾರಿಸುವ ಮಾದಿಗರು—ಇವರೆಲ್ಲರೂ, ಶ್ರಮವಿಲ್ಲದೆ ಉಣ್ಣುವ ಜೀವಿಗಳಿಗಿಂತ ಪವಿತ್ರರೂ ಶ್ರೇಷ್ಠರೂ ಆಗಿರುತ್ತಾರೆ.

73. ಯಾವುದನ್ನೇ ಆಗಲಿ–ನಿರ್ಮಾಣಮಾಡಿರಿ. ಒಳ್ಳೆಯ ವಿಚಾರಗಳನ್ನು ನಿರ್ಮಾಣಮಾಡಿರಿ. ಯಾವುದೇ ಒಂದು ಮಂಗಲಕರವಾದ ಸುಂದರವಾದ ಹಿತಕರವಾದ ಕಾರ್ಯವನ್ನು ಮಾಡಿರಿ, ಆಂದರೆ ಮಾತ್ರ ನಿಮಗೆ ಈ ಜಗತ್ತಿನಲ್ಲಿ ಬಾಳಲು ಅಧಿಕಾರವಿರುತ್ತದೆ.

ಸಾನೆ ಗುರುಜಿ.

74. ಜನರು ಸುಖವೆಂದು ಕರೆಯುತ್ತಾರಲ್ಲಾ—ಅದು ಎಷ್ಟೊಂದು ವಿಚಿತ್ರವಾದುದು! ಅದಕ್ಕೂ, ಅದಕ್ಕೆ ವಿರುದ್ಧವಾದ್ದೆಂದು ತೋರುವುದಕ್ಕೂ ದುಃಖಕ್ಕೂ,: ಏನೋ ಒಂದು ಗೂಢವಾದ ಸಂಬಂಧವಿದೆ. ಅವೆರಡೂ ಏಕಕಾಲದಲ್ಲಿ ಮನುಷ್ಯನ ಅನುಭವಕ್ಕೆ ಬರುವುದಿಲ್ಲ. ಆದರೂ ಒಂದನ್ನು ಅರಸಿಕೊಂಡು ಹೋಗುವವನು ಮತ್ತೊಂದನ್ನು ತೆಗೆದುಕೊಳ್ಳಬೇಕಾಗುವುದು.

75. ದುಃಖವು ಮನುಷ್ಯನನ್ನು ದಾರ್ಶನಿಕನನ್ನಾಗಿ ಮಾಡುತ್ತದೆ.

74. ದುಃಖವು ಸುಖದ ಮೂಲವಾದರೂ ಮಳೆಯ ಮೂಲವಾದ ಗುಡುಗಿನಂತೆ, ಸಿಡಿಲಿನಂತೆ, ಬಿರುಗಾಳಿಯಂತೆ—ಕಠಿನತರ.

77. ಜೀವನದ ಹಸುರು ಮಾಯವಾದಾಗ, ಒಣಗತೊಡಗಿದಾಗ, ಪಕ್ಷಿಸಂಕುಲದ ಕಲಕಲ ರವವು ಮೌನಗೊಂಡಾಗ, ಸೂರ್ಯಬಿಂಬವು ಗ್ರಹಣದಿಂದ ಕಪ್ಪಾಗಿ ಕಂಡಾಗ, ನನ್ನ ಆತ್ಮೀಯರೂ, ಬಂಧುಗಳೂ

ನಡುದಾರಿಯಲ್ಲಿಯೇ ಕೈಬಿಟ್ಟು ತೊಲಗಿದಾಗ, ನನ್ನ ಭಾಗ್ಯವನ್ನು ಲೋಕದ ಕ್ರೋಧವೆಲ್ಲ ಆಕ್ರಮಿಸಿದಾಗ,—ಓ ನನ್ನ ಪ್ರಭುವೇ, ನೀನು ಇಷ್ಟೊಂದು ಕೃಪೆಮಾಡು:—ಆ ಗಳಿಗೆಗೆ ನನ್ನ ಅಧರಗಳಲ್ಲಿ ಆನಂದದ ನಸುನಗೆ ಮೂಡಲಿ!

ಷೇರ್‌ಷಾ ಹಸೋ.

78. ಪ್ರತಿಫಲದ ಆಸೆಯಿಲ್ಲದೆ ಸೇವೆಮಾಡುವುದು ಇತರರಿಗೆ ಮಾಡುವ ಸಹಾಯವಲ್ಲ. ಬದಲಾಗಿ, ನಮಗೇ ಮಾಡಿಕೊಳ್ಳುವ ಸಹಾಯವಾಗಿದೆ.

79. ತ್ಯಾಗದಿಂದಲೇ ಮನುಷ್ಯನು ಪ್ರಾಣಿಗಳಿಗಿಂತ ಉತ್ತಮನಾಗುವನು.

80. ಸತ್ಯವು ಸ್ವಯಂಪ್ರಕಾಶವುಳ್ಳುದು. ಅದಕ್ಕೆ ಮುತ್ತಿಕೊಂಡಿರುವ ಅಜ್ಞಾನವೆಂಬ ಕೊಳೆಯನ್ನು ಹೋಗಲಾಡಿಸಿದೊಡನೆ ಅದು ಪ್ರಕಾಶಿಸುತ್ತದೆ.

81. ನಮ್ಮ ಗುರಿ—ನಮ್ಮ ದಾರಿ—ನೇರವಾಗಿದ್ದು ಶುದ್ಧವಾಗಿದ್ದರೆ ದೇವರು ನಮ್ಮ ಪ್ರಾರ್ಥನೆಯನ್ನು ಕೇಳಿಯೇ ಕೇಳುವನು, ಅಂತೇ ಅನುಗ್ರಹಿಸುವನು, ಖಂಡಿತ.

82. ಯಾವನಿಗೆ ತನ್ನ ಮನುಷ್ಯತ್ವದ ಮೇಲೆ ಅಭಿಮಾನವಿದೆಯೋ ಅವನು ಈಶ್ವರನಿಗಲ್ಲದೆ ಇನ್ನಾರಗೂ ಹೆದರ ತಲೆಬಾಗಲಾರನು.

83 ಭಿಕ್ಷುಕನೇ ಆಗಿರಲಿ, ತನ್ನ ದಿನದ ಕರ್ಮವನ್ನು ಮಾಡದ ಹೊರತು ಆಹಾರಕ್ಕೆ ಅರ್ಹತೆಯನ್ನು ಪಡೆಯುವುದಿಲ್ಲ. ಅವನು ಹಾಗೆ ಕರ್ಮಮಾಡದಿದ್ದಲ್ಲಿ ಆತನನ್ನು ಆಹಾರವಿಲ್ಲದೆ ಕಳಿಸಿಬಿಡಲು ನಾನು ಹಿಂಜರಿಯಲಾರೆ.

84. ಇತರರಿಗಾಗಿ ಮನುಷ್ಯನು ಎಷ್ಟೆಷ್ಟು ಕೆಲಸಗಳನ್ನು ಮಾಡುತ್ತಾನೋ ಅಷ್ಟಷ್ಟು ಮಹನೀಯನಾಗುತ್ತಾನೆ.

ಗಾಂಧಿಜಿ.

Edited, Printed & Published by K. V. Shenoy
at The Prabhat Printers, Ltd., Mangalore.